ಓ.ಎಸ್. ನಂಃ 15 /2018 ಡಿ.ಡಬ್ಲ್ಯೂ (1)/ಪ್ರತಿವಾದಿ ನಂ.1

**ದಿನಾಂಕಃ 09-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು, ವಾದಿ ಪರ ವಕೀಲರಾದ ಶ್ರೀ ಬಿ.ಸಿ.ಜಿ ವಕೀಲರಿಂದಃ**

1. ನಾನು ಶಾಲೆ ಕಲೆತಿಲ್ಲ. ಈ ಕೇಸ್ ಹಾಕಿದ ನಂತರ ನನ್ನ ಮಗಳು ಯಮನವ್ವ ನನ್ನನ್ನು ಮಾತನಾಡಿಸಿಲ್ಲ ಎಂದರೆ ಸರಿ. ನಮ್ಮ ಆಸ್ತಿಯಲ್ಲಿ ಭಾಗ ಬೇಕು ಎಂದು ಅವಳು ಕೇಸ್ ಹಾಕಿದ್ದಾಳೆ. ಅವಳು ಯಾರ ಯಾರ ವಿರುದ್ಧ ಈ ಕೇಸ್ ಹಾಕಿದ್ದಾಳೆ ಅಂತಾ ಮಾಹಿತಿ ಇಲ್ಲ. ಅಮರಾಪುರ ಹದ್ದಿ ಸರ್ವೆ ನಂ.21, 30, ಬೂದಗುಂಪಾ ಸೀಮಾ ಸರ್ವೆ ನಂ.16 ಇವುಗಳ ಮೇಲೆ ಕೇಸ್ ಹಾಕಿದ್ದಾಳೆ. ಅವುಗಳ ಕ್ಷೇತ್ರ ನನಗೆ ಗೊತ್ತಿಲ್ಲ ಎಂದರೆ ಸರಿ.

2. ನನ್ನ ಮೊದಲನೇ ಹೆಂಡತಿ ಶಿವನಾಗವ್ವ ನನ್ನ ವಿರುದ್ದ ಕುಟುಂಬ ನ್ಯಾಯಾಲಯದಲ್ಲಿ ಜೀವನಾಂಶ ಕೇಳಿ ಕೇಸ್ ಹಾಕಿದ್ದಳು ಎಂದರೆ ಸರಿ. ಅವಳು ಮಗಳನ್ನು ತೆಗೆದುಕೊಂಡು ಬೇರೊಬ್ಬನ (ಹೊನ್ನಪ್ಪ) ಜೊತೆ ಓಡಿಹೋದಳು. ಆತನು ಸಹ ಪಾರ್ಶಿ ಹೊಡೆದು ಸತ್ತ . ಅದಕ್ಕೆ ನಾನು ಪೋಲೀಸ್ ಫಿರ್ಯಾದಿ ಕೊಟ್ಟಿಲ್ಲ. ಅವಳಿಗೂ ನನಗೂ ವಿವಾಹ ವಿಚ್ಛೇಧನೆ ಆಗಿಲ್ಲ. ತಿಂಗಳಿಗೆ 5 ಸಾವಿರ ಜೀವನಾಂಶ ಕೊಡಬೇಕು ಎಂದು ಆದೇಶ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ವಿಷಯ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅವಳು ಓಡಿಹೋಗಿಲ್ಲ ಎಂದರೆ ಸರಿಯಲ್ಲ. ಈಗ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

3. ಇಲ್ಲಿಯವರೆಗೂ ನನಗೆ ದೊಡ್ಡ ಖಾಯಿಲಗಳು ಬಂದಿಲ್ಲ ಎಂದರೆ ಸರಿ. ಈ ಕೇಸಿನಲ್ಲಿ ತಕರಾರು ಬರೆಯಲು ಊರ ಹಿರಿಯರು ಮಾಹಿತಿ ಕೊಟ್ಟಿದ್ದಾರೆ. ಅದರಲ್ಲಿ ಏನು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಮುಖ್ಯವಿಚಾರಣೆ ವಿಷಯ ಗೊತ್ತಿಲ್ಲ ಎಂದರೆ ಸರಿ. ದಿನಾಂಕಃ09-03-2018 ರಂದು ವಾದಿ ನನ್ನ ಹತ್ತಿರ ಬಂದು ಪಾಲು ಕೇಳಿದಳು ಎಂದರೆ ಸರಿಯಲ್ಲ. ಅವಳು ಬಂದಿಲ್ಲ ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಅವುಗಳಿಂದ ಪಾಲು ಕೊಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**4.** ನಿಡಿ-**1** ದತ್ತಕ ಪತ್ರ ಶೇಖಪ್ಪ ಬರೆದಿದ್ದಾನೆ. ಆದನ್ನು ಬರೆಯಲು ಸ್ಟ್ಯಾಂಪ್ ಪೇಪರ್ ಯಾರು ತಂದರು ಗೊತ್ತಿಲ್ಲ. ಹನುಮೇಶ ಈತನ ವಯಸ್ಸು, ಉದ್ಯೋಗ ಕಾಣಿಸಿಲ್ಲ ಎಂದರೆ ಸರಿಯಲ್ಲ. ನಿಂಗಪ್ಪನ ಮಗನಾದ ಹನುಮೇಶನನ್ನು ನಿಡಿ-**1** ರಂತೆ ದತ್ತಕ ಪಡೆದಿದ್ದೇನೆ. ನಿಂಗಪ್ಪ ನನ್ನ ಮಾವ. ಗಂಗವ್ವ ನನಗೆ ತಂಗಿಯಾಗಬೇಕು. ದತ್ತಕ ಪತ್ರದಲ್ಲಿ ಇರುವ ತನ್ನ ಹೆಬ್ಬಟ್ಟಿನ ಗುರುತನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಸದರಿ ದತ್ತಕ ಪತ್ರವನ್ನು ಈಗಾಗಲೇ ನಿಡಿ-**1** ಎಂದು ಗುರುತಿಸಿದ್ದು, ಹೆಬ್ಬಟ್ಟಿನ ಗುರುತನ್ನು ನಿಡಿ-**1(**ಎ**)** ಎಂದು ಗುರುತಿಸಲಾಯಿತು. ನಿಡಿ-**1** ರ ಪ್ರಕಾರ ನಾನು ದತ್ತಕ ಸ್ವೀಕಾರ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಹನುಮೇಶ ಈತನು ತಂದೆ ತಾಯಿ ಜೊತೆ ಇರುತ್ತಾನೆ ಎಂಬ ಪ್ರಶ್ನೆಗೆ ಸಾಕ್ಷಿಯು ಹೋಗಿ ಬಂದು ಮಾಡುತ್ತಾನೆ, ನಮ್ಮ ಹತ್ತಿರ ಇರುತ್ತಾನೆ ಎಂದು ಹೇಳುತ್ತಾರೆ.

**5.** ನನ್ನದು ರೇಷನ್ ಕಾರ್ಡ್ ಇರುತ್ತದೆ. ಆದರಲ್ಲಿ ನಾನು ಮತ್ತು ನನ್ನ **2** ನೇ ಹೆಂಡತಿ ಬಸವ್ವ ಮಾತ್ರ ಇರುತ್ತೇವೆ. ನಿಡಿ-**1** ದತ್ತಕ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಡಿ-**1** ಅನ್ನು ಬರೆದು **13** ವರ್ಷ ಆಯಿತು. ದಿನಾಂಕ ಮತ್ತು ತಿಂಗಳು ಹೇಳಲು ಬರುವುದಿಲ್ಲಾ. ನಾನು ಶಾಲೆ ಕಲೆತಿಲ್ಲ. ನಿಡಿ-**1** ಅನ್ನು ಇತ್ತೀಚೆಗೆ ಸೃಷ್ಟಿ ಮಾಡಿ ಹಾಕಿದ್ದೇವೆ ಎಂದರೆ ಸರಿಯಲ್ಲ. ಅದು ನೊಂದಣಿ ಆಗಿಲ್ಲ ಎಂದರೆ ಸರಿ. ಮೊದಲ ಪುಟದಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ.

**6.** ನನಗೆ ಏಡ್ಸ್ ಮತ್ತು ಕ್ಯಾನ್ಸರ್ ಆಗಿಲ್ಲ ಎಂದರೆ ಸರಿ. ಆದರೆ ಇತರೆ ನಮೂನೆ ರೋಗಗಳು ತುಂಬಾ ಇದೆ ಎನ್ನುತ್ತಾರೆ. ನನ್ನ ಮಗಳಿಗೆ ನಾನು ಆಸ್ತಿಯಲ್ಲಿ ಭಾಗ ಕೊಡಲು ತಯಾರಿದ್ದೇನೆ. ಆದರೆ **3** ಭಾಗ ಆಗಬೇಕು. ಒಂದು ಭಾಗ ನನಗೆ, ಮಗಳು ಯಮುನಮ್ಮಗೆ ಒಂದು ಭಾಗ ಹಾಗೂ ಇನ್ನೊಂದು ಭಾಗ ಹನುಮೇಶನಿಗೆ ಹೋಗಬೇಕು ಎನ್ನುತ್ತಾರೆ. ಹನುಮೇಶನಿಗೆ ಯಾವುದೇ ಭಾಗ ಬರುವುದಿಲ್ಲ. ಅವನನ್ನು ಅನವಶ್ಯಕವಾಗಿ ತರುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹನುಮೇಶ ನನ್ನನ್ನು ನೋಡಿಕೊಳ್ಳುತ್ತಿದ್ದಾನೆ. ಮಗಳು ಬರುವುದಿಲ್ಲ ನೋಡುವುದಿಲ್ಲ ಅದಕ್ಕಾಗಿ ಹನುಮೇಶನಿಗೂ ಸಹ ಪಾಲು ಕೊಡಬೇಕು ಎನ್ನುತ್ತಿದ್ದಾರೆ.

**7.** ಸರ್ವೆ ನಂ.**16**/ಬ **1** ಕ್ಷೇತ್ರ **2** ಎಕರೆ **20** ಗುಂಟೆ ಇದನ್ನು ನಾನು ದಿಃ**04-04-2006** ರಂದು ಪ್ರತಿವಾದಿ ನಂ.**4** ಮರಿಯಪ್ಪ ಮ್ಯಾದಿನೇರಿ ಇವರಿಗೆ ರೂ.**90,000/-** ಗಳಿಗೆ ನೊಂದಾಯಿತ ಖರೀದಿ ಪತ್ರ ಬರೆದುಕೊಡುವ ಮೂಲಕ ಮಾರಿದ್ದೇನೆ ಎಂದರೆ ಸರಿ. ಮಾರಾಟ ಮಾಡುವ ಅವಶ್ಯಕತೆ ಇಲ್ಲದಿದ್ದರೂ ಸಹ ಸದರಿ ಆಸ್ತಿಯನ್ನು ನಾನು ಮಾರಾಟ ಮಾಡಿದೆ ಎಂದರೆ ಸರಿಯಲ್ಲ. ಎಲ್ಲರೂ ಸಹ ವಾದಿಗೆ ಅರ್ಧ ಪಾಲು ಬರುತ್ತದೆ ಎಂದರೆ ಸರಿಯಲ್ಲ. ನನ್ನ ತಕರಾರಿನಲ್ಲಿ ಆರಾಮಿರಲಿಲ್ಲ ಎಂದು ಬರೆಸಿದ್ದೇನೆ. ಚಿಕಿತ್ಸೆ ಪಡೆದ ಕುರಿತು ದಾಖಲೆ ಹಾಜರುಪಡಿಸಿಲ್ಲ. ನನಗೆ ಯಾವುದೇ ಖಾಯಿಲೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**8.** ಪ್ರತಿವಾದಿ ನಂ.**5** ಅನಿತಾ ಡೊಳ್ಳಿನ್ ಇವರಿಗೆ ಅಮರಾಪುರದ ಜಮೀನು ಸರ್ವೆ ನಂ.**21**/ಇ/**1,** ಕ್ಷೇತ್ರ **3** ಎಕರೆ **6** ಗುಂಟೆ ಪೈಕಿ **2** ಎಕರೆ ಜಮೀನನ್ನು ದಿನಾಂಕಃ **02-11-2023** ರಂದು **3** ಲಕ್ಷ ರೂಪಾಯಿಗಳಿಗೆ ಮಾರಿದ್ದೇನೆ ಎಂದರೆ ಸರಿ. ಮಾರಾಟ ಮಾಡುವ ಪೂರ್ವ ಈ ಜಮೀನು ಪೋಡಿ ಮಾಡಿಸಿದ್ದೆ ಎಂದರೆ ಸರಿ. ಇನ್ನೂಳಿದ **1** ಎಕರೆ **6** ಗುಂಟೆ ನನಗೆ ಉಳಿದುಕೊಂಡಿದೆ ಎಂದರೆ ಸರಿ. ಅದರಲ್ಲೂ ಸಹ ವಾದಿಗೆ ಪಾಲು ಬರುತ್ತದೆ ಎಂದರೆ ಸರಿಯಲ್ಲ. ಅದರಲ್ಲೂ ಸಹ ಅವಳಿಗೆ ಅರ್ಧ ಪಾಲು ಬರುತ್ತದೆ ಎಂದರೆ ಸರಿಯಲ್ಲ. ಜಮೀನು ಮಾರಿದಾಗ ಈ ಕೇಸ್ ಪೆಂಡಿಂಗ್ ಇತ್ತು ಎಂದರೆ ಸರಿ.

**9.** ಮಗಳಿಗೆ ಪಾಲು ಕೊಡುವುದರಿಂದ ತಪ್ಪಿಸಿಕೊಳ್ಳಲು ದತ್ತಕ ಪತ್ರ ಸೃಷ್ಟಿ ಮಾಡಿದ್ದೆ ಎಂದರೆ ಸರಿಯಲ್ಲ. ಹನುಮೇಶ ಈತನು ನಮ್ಮ ಮನೆಯಲ್ಲಿ ಇರುತ್ತಾನೆ ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.**4** ಮತ್ತು **5** ಇವರಿಗೆ ಜಮೀನುಗಳು ಮಾರಾಟದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

**10.** ಸಾಕ್ಷಿದಾರ ನಂ.**1** ಬಸವರಾಜ ಹಾಗೂ ಸಾಕ್ಷಿದಾರ ನಂ.**2** ಮರಿಯಪ್ಪ ನನಗೆ ಸಂಬಂಧಿಕರು ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಹಿರಿಯ ವ್ಯವಹಾರ ನ್ಯಾಯಾಧೀಶರು, ಕೊಪ್ಪಳ.**